ವಿವೇಕ ಎಚ್ಚರಿಕೆ ನೀಡಿತು. ಪ್ರತಿಜ್ಞೆಯನ್ನು ನೆನಪು ಮಾಡಿತು.

ಎಂಥ ಸಮಯದಲ್ಲಿಯೂ ಸಹ ಬೇರೆಯವರ ಮೇಲೆ ಮಾಂತ್ರಿಕ ಪ್ರಯೋಗ ಮಾಡಲಾರೆ. ಇಲ್ಲ... ಇಲ್ಲ... ಇಂಥ ಆಲೋಚನೆಯನ್ನು ನಾನು ಮಾಡಬಾರದು. ಪ್ರತಿಜ್ಞೆಗೆ ಭಂಗ ಬರಬಾರದು. ಅದಕ್ಕೆ ಅವಕಾಶ ಕೊಡಲಾರೆ. ಆದರೆ ಭವಿಷ್ಯ ಯಾರು ಕಂಡಿದ್ದಾರೆ? ಏನೇನು ಆಗುತ್ತದೋ? ಎಂಥ ಪರಿಸ್ಥಿತಿಗಳು ಎದುರಾಗುತ್ತದೋ? ಯಾರಿಗೆ ಗೊತ್ತು? ಭವಿಷ್ಯ ನಿಗೂಢ ತಾನೆ?

* * *

ಗಂಟೆಯ ಶಬ್ದ!

ಮಧುರವಾಗಿ ಹಾಡು ಹೇಳುತ್ತಿದ್ದಾರೆ. ಈಗ ಮಲ್ಲಿಗೆ ಕುತೂಹಲದಿಂದ ಹೊರಗೆ ಬಂದಳು. ಎದುರುಗಡೆಯ ಮನೆಯಲ್ಲಿ ದೇವರ ಪೂಜೆ ನಡೆಯುತ್ತಿದೆ. ಸುಮಂಗಲಿಯರು ಸೇರಿದ್ದಾರೆ. ಹಾಡು ಹೇಳುತ್ತಿದ್ದಾರೆ. ಮಂಗಳಾರತಿ ಬೆಳಗುತ್ತಿದ್ದಾರೆ. ಮಲ್ಲಿಗೆ ತಾನೇನು ಮಾಡುತ್ತಿದ್ದೇನೆ ಎಂಬ ಅರಿವು ಇಲ್ಲದೆ ಅತ್ತ ನಡೆದಳು. ಹೆಂಗಸರ ನಡುವೆ ಬಂದಳು. ಅವರೆಲ್ಲ ಬೆಚ್ಚಿಬಿದ್ದು ದೂರ ಸರಿದರು. ಪುರೋಹಿತರ ಮಂತ್ರ ನಿಂತಿತು. ಭಯದಿಂದ ಇವಳನ್ನೇ ನೋಡಲಾರಂಭಿಸಿದರು. ದೇವರಿಗೆ ಆರತಿ ಬೆಳಗುತ್ತಿದ್ದವರ ಕೈ ನಡುಗಿತು. ಆರತಿ ತಟ್ಟೆ ಕೈ ಜಾರಿತು. ಮನೆಯ ಯಜಮಾನ ಕೋಪದಿಂದ 'ನೀನು... ನೀನ್ಯಾಕೆ ಇಲ್ಲಿಗೆ ಬಂದೆ?'

ಅವಳಿಗೆ ಏನು ಉತ್ತರಿಸಬೇಕು ಅಂತ ಗೊತ್ತಾಗಲಿಲ್ಲ. ಪಿಳಿಪಿಳಿ ನೋಡಲಾರಂಭಿಸಿದಳು. ಅವಳ ಭುಜದ ಮೇಲೆ ಕೈ ಬಿದ್ದಿತು. ಬೆಚ್ಚಿಬಿದ್ದು ಹಿಂತಿರುಗಿದಳು. ಮಾವ ರುದ್ರನಾಗ, ಅವಳ ತಲೆಯ ಕೂದಲನ್ನು ಹಿಡಿದು ಎಳೆದುಕೊಂಡು ಅಲ್ಲಿಂದ ಸರಸರನೆ ನಡೆದ.

ಎಲ್ಲರೂ ದಿಗ್ಭ್ರಾಂತರಾಗಿದ್ದಾರೆ. ಮೊದಲಿನಿಂದಲೂ ಆ ಮನೆಯಲ್ಲಿ ನಿಯಮವನ್ನು ಪಾಲಿಸಿಕೊಂಡು ಬಂದಿದ್ದರು. ಆ ಮನೆಯಲ್ಲಿ ದೇವರ ವಿಗ್ರಹ ಅಥವಾ ಫೋಟೋಗಳಿರಲಿಲ್ಲ. ಆ ಮನೆಯವರು ದೇವರ ಸ್ಮರಣೆ ಮಾಡುವ ಹಾಗಿಲ್ಲ. ಅದು ಮಾಂತ್ರಿಕ ವೃತ್ತಿಗೆ ಕೂಡಿ ಬರುವುದಿಲ್ಲ. ದೈವಗಳ ಆರಾಧಕ ದೇವರಿಂದ ದೂರ ಇರಬೇಕು!

ರುದ್ರನಾಗ ಈಗ ರಕ್ತಚಂಡಿಯ ವಿಗ್ರಹದ ಹತ್ತಿರ ಇದ್ದ ನಾಗರ ಬೆತ್ತ ಎತ್ತಿಕೊಂಡ. ಮಲ್ಲಿಗೆ ಗಡಗಡನೆ ನಡುಗಿದಳು. ರುದ್ರನಾಗ ಅವಳ ಹತ್ತಿರ ಬರುತ್ತಾ 'ನಿನಗೆ ನಾನು ಈ ಮೊದಲೇ ಹೇಳಿದ್ದರೂ ಸಹ ನನ್ನ ಮಾತನ್ನು ಮೀರಿ ಅಲ್ಲಿಗೆ ಹೋಗಿದ್ದೀಯ' ಅವಳು ಭಯದಿಂದ ನಡುಗುತ್ತಿರುವಾಗಲೇ ನಾಗರ ಬೆತ್ತ ನರ್ತಿಸಲಾರಂಭಿಸಿತು.

ರುದ್ರನಾಗನಿಗೆ ಮಲ್ಲಿಗೆಯನ್ನು ನೋಡಿದರೆ ಅವನ ತಂಗಿ ಅರುಂಧತಿ ನೆನಪಾಗುತ್ತಿದ್ದಳು. ತಾಯಿಯ ಹೋಲಿಕೆ ಮಲ್ಲಿಗೆಗೆ ಇದೆ. ಪ್ರತಿ ಹೊಡೆತದಲ್ಲಿಯೂ ಸೇಡಿನ ಬಿರುಸು ತುಂಬಿದೆ. ತಂಗಿಯನ್ನು ನೆನಪು ಮಾಡಿಕೊಂಡು ಮಗಳಿಗೆ ಯಮ ಬಡಿತ ಬಡಿಯುತ್ತಿದ್ದಾನೆ.

ಕತ್ತಲು... ಕತ್ತಲು ತುಂಬಿದೆ. ಅಲ್ಲಿ... ಅಲ್ಲಿ ಕೇಳಿಬರುತ್ತಿದೆ ನರಳುವಿಕೆ. 'ಅಯ್ಯೋ... ಅಮ್ಮಾ... ಹೂಂ... ಹೂಂ...' ಎನ್ನುತ್ತಿದ್ದಾಳೆ. ಬಾಗಿಲು ತೆರೆದುಕೊಂಡಿತು. ಯಾರೋ ಒಳಗೆ ಬರುತ್ತಿದ್ದಾರೆ. ಮಲ್ಲಿಗೆ ಭಯಗೊಂಡಳು. ಪುನಃ ಹೊಡೆಯಲು ಮಾವನೇ ಬಂದಿರಬೇಕು ಎನಿಸಿತು. ದೀಪ ಹೊತ್ತಿಸಲಾಯಿತು.

ಮಾವ ಅಲ್ಲ. ಮಾಂತ್ರಿಕ ಗುರು. ಜುಬ್ಬಾ ಪೈಜಾಮ ಧರಿಸಿರುವ ನಲವತ್ತರ ಪ್ರಾಯದ ಮದಂತ. ಅನುಕಂಪದಿಂದ ನೋಡಿದ. ಮಂಚದ ಮೇಲೆ ಮುದುರಿಕೊಂಡು ಮಲಗಿದ್ದಾಳೆ ಮಲ್ಲಿಗೆ. ಬಿಳುಪು ಬಣ್ಣದ ದೇಹದ ತುಂಬಾ ಬಾಸುಂಡೆಗಳು ಮೂಡಿವೆ. ಮಲ್ಲಿಗೆ ಅಳುತ್ತಿದ್ದಾಳೆ. ನೋವು... ಉರಿ. ಅವಳಿಗೆ ಜ್ವರ ಸಹ ಬಂದಿದೆ. ಮದಂತ ಅವಳ ಹತ್ತಿರ ಕುಳಿತು ತಾನು ತಂದಿದ್ದ ಮುಲಾಮನ್ನು ಗಾಯಗಳ ಮೇಲೆ ಸವರಿದ. ರವಿಕೆ, ಲಂಗ ಸಡಿಲಿಸಿ ಅಲ್ಲಿ ಉಂಟಾಗಿದ್ದ ಬಾಸುಂಡೆಗಳಿಗೆ ಲೇಪಿಸಿದ.

ತೋಳ ಕಚ್ಚಿಕೊಂಡು ಹೋಗುತ್ತಿದ್ದ ಈ ಮಲ್ಲಿಗೆಯನ್ನು ಕಾಪಾಡಿದ್ದು ಮದಂತ. ಅಳುತ್ತಿದ್ದ ಮಗುವಿಗೆ ಮೊದಲು ಹಾಲನ್ನು ಕುಡಿಸಿದ್ದು ಮದಂತ. ಅದಕ್ಕೆ ಕರುಣೆ... ವಾತ್ಸಲ್ಯ ಮತ್ತು ಸಾಕಿರುವ ಮಮಕಾರ ತುಂಬಿದೆ. ಅವಳಿಗೆ ಎರಡು ಮಾತ್ರೆಗಳನ್ನು ನುಂಗಿಸಿ ನೀರು ಕುಡಿಸಿದ. ಪ್ರೀತಿಯಿಂದ ತಲೆ ಸವರಿದ.

ಅಪ್ಪಅಮ್ಮನ ಪ್ರೀತಿ ಕಾಣದ ಮಲ್ಲಿಗೆಗೆ ಮದಂತನೇ ಎಲ್ಲಾ.

ಮದಂತ ಮೆಲ್ಲಗೆ 'ಮಲ್ಲಿಗೆ... ನಿನ್ನ ತಾಯಿಯ ಫೋಟೊ ನೋಡಿದ್ದೀಯಾ?'

ಇಲ್ಲವೆಂಬಂತೆ ತಲೆಯಾಡಿಸಿದಳು.

'ಕನ್ನಡಿಯಲ್ಲಿ ನಿನ್ನ ಮುಖ ನೋಡಿಕೊಂಡಿದ್ದೀಯ' ಎಂದು ತಿಂಡಿ ತಿನ್ನಿಸಿದ.

'ಹೂಂ... ನೋಡಿಕೊಂಡಿದ್ದೇನೆ'

'ನಿನ್ನ ತಾಯಿ ನಿನ್ನಂತೆ ಇದ್ದಾಳೆ'

ಅವಳ ಮುಖ ಅರಳಿತು. ಸಂತೋಷ ಮತ್ತು ಕಾತುರದಿಂದ 'ನನ್ನ ತಾಯಿ ಎಲ್ಲಿದ್ದಾಳೆ?'

'ತುಂಬಾ ದೂರದ ಊರಿನಲ್ಲಿ'

'ಅವಳು ಇಲ್ಲಿಗ್ಯಾಕೆ ಬರೋಲ್ಲ? ಎಲ್ಲಾ ತಾಯಂದಿರು ಮಕ್ಕಳ ಜೊತೆ ಇರುತ್ತಾರೆ. ನನ್ನ ತಾಯಿ ಯಾಕೆ ದೂರ ಇದ್ದಾಳೆ?' 'ಕಾರಣ ನನಗೆ ಗೊತ್ತಿಲ್ಲ' ಎಂದು ಸುಳ್ಳು ಹೇಳಿದ ಮದಂತ.

'ಮಾವನಿಗೆ ಗೊತ್ತಿದೆಯೆ?'

'ಅವರನ್ನು ಕೇಳುತ್ತೀಯಾ?'

ತಲೆಯಾಡಿಸಿದಳು ಮಲ್ಲಿಗೆ.

ಮದಂತ ಭಯದಿಂದ 'ನಿನ್ನ ತಾಯಿತಂದೆಯ ಬಗ್ಗೆ ಮಾತಾಡಿದರೆ ನಿನ್ನ ಮಾವ ಮತ್ತೊಂದು ಸಲ ಬೆತ್ತ ಎತ್ತಿಕೊಳ್ಳುತ್ತಾನೆ'

ಗಡಗಡನೆ ನಡುಗಿದಳು ಮಲ್ಲಿಗೆ.

'ನೀನು ಯಾವ ಸಂಗತಿಯನ್ನೂ ಸಹ ಮಾವನ ಹತ್ತಿರ ಮಾತಾಡಬೇಡ' ಎಂದ ಮದಂತ.

'ಮತ್ತೇ... ನನ್ನ ತಾಯಿ...?'

ಮದಂತ ಅವಳ ತಲೆ ಸವರುತ್ತಾ 'ನಿನಗೆ ಅದೃಷ್ಟ ಇದ್ದರೆ ನಿನ್ನ ತಾಯಿಯನ್ನು ನೋಡುತ್ತೀಯ.'

ಮದಂತ ಏನೋ ಈ ರೀತಿ ಹೇಳಿದ. ಆದರೆ ಅಗೋಚರ ವಿಧಿ ನಗುತ್ತಿತ್ತು.

* * *

ಸಂಕಟ... ಸಂಕಟ. ಇಲ್ಲ... ತಡೆಯಲಾಗುತ್ತಿಲ್ಲ. ಹಾಸಿಗೆಯ ತುಂಬಾ ಉರುಳುತ್ತಿದ್ದಾಳೆ. ಅದು ಹವಾ ನಿಯಂತ್ರಿತ ಕೊಠಡಿ. ಆದರೂ ಸಹ ಅವಳ ಕತ್ತಿನಲ್ಲಿ ಬೆವರು ಜಿನುಗುತ್ತಿದೆ. ನಲವತ್ತೈದರ ಪ್ರಾಯ ಅವಳಿಗೆ. ತುಸು ಮೈ ಬಂದಿದ್ದರೂ ಸಹ ಮುಖದ ಅಂದ ಮೊದಲಿನಂತೆಯೇ ಇದೆ. ತುಟಿಗಳ ಮಿಂಚು ಮಾಸಿಲ್ಲ. ಎದೆಯ ಅಂದ ಬಿಗಿ ಕಳೆದುಕೊಂಡಿಲ್ಲ. ಎಲ್ಲಿಯೂ ಸಹ ಸುಕ್ಕು ಕಂಡುಬರುತ್ತಿಲ್ಲ. ಅವಳು ಅಳುತ್ತಿದ್ದಾಳೆ. ಏನೇನೋ ಕನವರಿಸುತ್ತಿದ್ದಾಳೆ.

ಅವಳ ಪಕ್ಕದಲ್ಲಿ ಮಲಗಿದ್ದ ಅವಳ ಗಂಡನಿಗೆ ಎಚ್ಚರವಾಯಿತು. ಹೆಂಡತಿಯ ಭುಜ ಹಿಡಿದು ಅಲುಗಿಸುತ್ತಾ 'ಅರು... ಅರು ಯಾಕೆ... ಯಾಕೆ ಏನಾಯಿತು? ಯಾಕೆ ಅಳುತ್ತಿದ್ದೀಯ?'

ಅರುಂಧತಿಗೆ ಎಚ್ಚರವಾಯಿತು. ಗಂಡನನ್ನು ಬಿಗಿಯಾಗಿ ತಬ್ಬಿಕೊಂಡು ಜೋರಾಗಿ ಅಳಲಾರಂಭಿಸಿದಳು.

'ಯಾಕೆ ಅಳುತ್ತಿದ್ದೀಯ ಅರು...?'

'ಗೊತ್ತಿಲ್ಲ ಕಣ್ರೀ...'

'ಗೊತ್ತಿಲ್ಲದೆ ಅಳುತ್ತಾರೆಯೆ?'

ಅರುಂಧತಿ 'ನನ್ನ ಕರುಳನ್ನು ಹಿಂಡಿದಂತೆ ಆಗುತ್ತಿದೆ. ನನ್ನ ಮಗಳನ್ನು ಯಾರೋ ಹಿಂಸಿಸುತ್ತಿದ್ದಾರೆ.'

ಮನೋಹರ 'ನಿನ್ನ ಮಗಳು ರೂಮಿನಲ್ಲಿ ಬೆಚ್ಚಗೆ ಮಲಗಿಕೊಂಡಿದ್ದಾಳೆ. ನೀನು ಏನೇನೋ ಕಲ್ಪನೆ ಮಾಡಿಕೊಂಡು ತಲೆಕೆಡಿಸಿಕೊಳ್ಳುತ್ತೀಯಾ...'

'ರೀ... ನಿಮಗೆ ನೆನಪಿದೆಯ?'

'ಏನು?'

'ನಮ್ಮ ಮೊದಲ ಮಗು...'

ಮನೋಹರ ಬೆಚ್ಚಿಬಿದ್ದ. ತುಸು ಗಾಬರಿಯಿಂದಲೇ 'ಈಗ್ಯಾಕೆ ಅದನ್ನು ನೆನಪು ಮಾಡಿಕೊಳ್ಳುತ್ತಿದ್ದೀಯ.'

ಅವಳು ದುಃಖದಿಂದ 'ಈಗ ಮಾತ್ರ ಅಲ್ಲ ನನಗೆ ಆಗಾಗ ನೆನಪಾಗುತ್ತಲೇ ಇರುತ್ತದೆ. ಯಾಕೆ ಅಂದರೆ ಅದು ನನ್ನ ಕರುಳಿನ ಬಳ್ಳಿ...'

'ಅರು... ಏನಾಗಿದೆ ನಿನಗೆ?'

'ಸಂಕಟ ಜಾಸ್ತಿಯಾಗಿದೆ.'

ಮನೋಹರ 'ಆ ಮಗು ಬದುಕಿಲ್ಲ. ತೋಳ ಎತ್ತಿಕೊಂಡು ಹೋದ ಮೇಲೆ ಜೀವ ಉಳಿಯಲು ಸಾಧ್ಯವೆ?'

'ಒಂದು ವೇಳೆ ಉಳಿದಿದ್ದರೆ...?'

'ಜಾನಪದ ಕತೆಗಳಲ್ಲಿ ಸಾಧ್ಯ.'

ಅವಳಿಗೆ ನಿರಾಸೆಯಾಯಿತು. ಅವಳು 'ರೀ.. ರೀ... ನಾವು ಇಂಡಿಯಾಕ್ಕೆ ಯಾವಾಗ ಹೋಗೋಣ.?'

'ಈಗ್ಯಾಕೆ ಅಲ್ಲಿಗೆ ಹೋಗಬೇಕು?'

ಅವಳು ದುಃಖ, ಕೋಪದಿಂದ 'ನಾನು ಕಳೆದುಕೊಂಡಿರುವ ಮನಃಶಾಂತಿ ಅಲ್ಲಿ ಸಿಗಬಹುದು ಅಂತ'